### ಭಾವಲೋಕಕ್ಕೆ ಸೆಳೆಯಿತು

‘ಜುಮುಕಿ’ (ಜ. 23, ಮೇದಿನಿ ಕೆ.ಎಸ್.) ಕಥೆ ಇಷ್ಟವಾಯ್ತು. ಬರವಣಿಗೆ ಶೈಲಿ, ನವಿರಾದ ಭಾವ ನಿರೂಪಣೆ, ಸನ್ನಿವೇಶಗಳನ್ನು ಪದಗಳಲ್ಲಿ ಹಿಡಿದಿಟ್ಟ ರೀತಿ ಮುದ ನೀಡಿತು. ಭಾವಲೋಕಕ್ಕೆ ಸೆಳೆಯಿತು.

–ಸಿದ್ದಪ್ಪ ತಲ್ಲೂರ್



### ಭಗ್ನಪ್ರೇಮಿಗಳ ಮನದಾಳ

ಕಥೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಭಗ್ನಪ್ರೇಮಿಗಳ ಮನದಾಳದ ಮಿಡಿತ ಮನ ಮಿಡಿಯುವಂತೆ ವ್ಯಕ್ತಗೊಂಡಿದೆ. ಪ್ರೇಮಿಗಳು ದೂರವಾಗಿದ್ದರೂ ಅವರಲ್ಲಿದ್ದ ಪರಸ್ಪರ ಕಾಳಜಿ ಎಳೆಎಳೆಯಾಗಿ ಹೊರಹೊಮ್ಮಿದೆ. ರೂಪಶ್ರೀ ಕಲ್ಲಿಗನೂರು ಅವರ ಅಮೋಘ ಚಿತ್ರ ಕಥೆಯ ಸೊಗಸನ್ನು ಇನ್ನಷ್ಟು ಹೆಚ್ಚಿಸಿದೆ.

–ಗಾಯತ್ರಿ ವೆಂಕಟೇಶ್, ಮೈಸೂರು

### ಅದ್ಭುತ ಕಥೆ

‘ಯಾರಾದರೂ ಮುಂದುವರೆಸುವರೆಂದು’ (ಜ. 16, ಸ. ರಘುನಾಥ) ಕಥೆ ತುಂಬಾ ಇಷ್ಟವಾಯಿತು. ವಿಭಿನ್ನ ರೀತಿಯಲ್ಲಿ ಬರೆದ ಈ ಕಥೆ ಮತ್ತೆ ಮತ್ತೆ ಓದುವಂತಿತ್ತು. ಚಿಕ್ಕದಾಗಿದ್ದರೂ ತಲೆಗೆ ಕೆಲಸ ಕೊಟ್ಟ ಕಥೆ, ಅರ್ಥೈಸಿಕೊಳ್ಳಲು ಸಮಯ ಬೇಕಾಯಿತು. ಒಟ್ಟಾರೆ ತುಂಬಾ ಸಮಯದ ನಂತರ ಒಂದು ಅದ್ಭುತ ಕಥೆ ಓದಿ ಖುಷಿ ಆಯಿತು.

–ವೀಣಾ

### ಅರ್ಥಪೂರ್ಣ ಲೇಖನ

‘ಸಾವಿನ ಭಯ ದೂರವಾಗೋದು ಹೇಗೆ?’ (ಜ. 09, ಡಾ. ಅರುಣಾ ಯಡಿಯಾಳ್) ಮುಗ್ಧ ಮಕ್ಕಳಿಗೆ ಸಾವಿನ ಬಗ್ಗೆ ಇರುವ ತುಮುಲಗಳು ಹಾಗೂ ಮನುಷ್ಯನ ಬಗ್ಗೆ ಇರುವ ವ್ಯಾಮೋಹವನ್ನು ವಿವರಿಸಿದೆ. ಮನಸ್ಸನ್ನು ಗಟ್ಟಿಗೊಳಿಸುವ ಸಲುವಾಗಿ ಬರೆದಿರುವ ಲೇಖನ ಅರ್ಥಪೂರ್ಣವಾಗಿದೆ.

–ಹಾರಗದ್ದೆ ವಿ. ಗೋಪಿ




### ‘ವೈರಸ್’ ಲೋಕದೊಳಗೆ...

‘ವೈರಸ್ ಜೊತೆ ಜೊತೆಯಲಿ’ (ಜ. 23, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಜನರಿಗೆ ವೈರಸ್‌ಗಳ ಕುರಿತಂತೆ ಅತ್ಯುತ್ತಮ ಮಾಹಿತಿಗಳನ್ನು ಒದಗಿಸಿದೆ. ಲೇಖನದಲ್ಲಿನ ಎರಡು ಅಂಶಗಳಲ್ಲಿ ತಿದ್ದುಪಡಿ ಸೂಚಿಸುವುದು ಅಗತ್ಯವಿದೆ. ಮೊದಲನೆಯದಾಗಿ, ‘ಪ್ಲೇಗ್’ ಒಂದು ವೈರಲ್ ಕಾಯಿಲೆಯಲ್ಲ. ಅದು ‘ಯಾರ್ಸಿನಿಯಾ ಪೆಸ್ಟಿಸ್’ ಎಂಬ ಬ್ಯಾಕ್ಟೀರಿಯಾದಿಂದ ಬರುವಂಥದ್ದು. ಅದೃಷ್ಟವಶಾತ್ ಈಗ ಬಹಳ ಅಪರೂಪ. ಎರಡನೆಯದು, ವೈರಸ್ ರೋಗಗಳಿಗೆ ಲಸಿಕೆಗಳು ಮಾತ್ರ ಉಪಯುಕ್ತ ಎಂದು ಉಲ್ಲೇಖಿಸಲಾಗಿದೆ. ಪ್ರಸ್ತುತ ವೈರಾಲಜಿಯಲ್ಲಿ ಸಾಕಷ್ಟು ಪ್ರಗತಿಯಾಗಿದ್ದು, ವೈರಲ್ ಹೆಪಟೈಟಿಸ್, ಇನ್‌ಫ್ಲುಯೆಂಜಾ, ಸಿಎಂಇ ವೈರಸ್ ಹಾಗೂ ಭಯಾನಕ ಎಚ್‌ಐವಿ ವೈರಸ್‌ಗೂ ಹಲವಾರು ಔಷಧಿಗಳು ಲಭ್ಯವಿವೆ. ಹರ್ಪಿಸ್ ವೈರಸ್‌ಗೆ ಸಹ ಚಿಕಿತ್ಸೆಯಿದೆ.

–ಡಾ. ಓಂ ಪ್ರಕಾಶ್, ಸಂತ ಮಾರ್ಥಾಸ್ ಆಸ್ಪತ್ರೆ, ಬೆಂಗಳೂರು

### ಸರ್ವರಿಗೂ ಉಪಯುಕ್ತ

ತುಂಬಾ ಉಪಯುಕ್ತ ಲೇಖನ. ಮೆಡಿಕಲ್ ವಿದ್ಯಾರ್ಥಿಗಳಿಗೆ, ಆರೋಗ್ಯಸೇವೆಯಲ್ಲಿ ತೊಡಗಿಕೊಂಡಿರುವವರಿಗೆ ಹಾಗೂ ಸಾಮಾನ್ಯ ಜನರಿಗೂ ಹಲವು ಮಾಹಿತಿಗಳನ್ನು ಒಳಗೊಂಡಿದೆ. ಇಂಥ ಲೇಖನಗಳು ‘ಸುಧಾ’ ಘನತೆಗೆ ಸಾಕ್ಷಿ. ಮುಂದೆಯೂ ಇಂಥ ಲೇಖನಗಳು ಮೂಡಿಬರಲಿ ಎಂದು ಆಶಿಸುತ್ತೇವೆ.

–ಡಾ. ಮಹಾಬಲರಾಜು ಡಿ.ಕೆ., ದಾವಣಗೆರೆ

### ‘ವೈರಸ್’ಗೂ ಪ್ರಸಿದ್ಧಿ!

ವೈರಸ್ ಬಗ್ಗೆ ನಮಗೆ ತಿಳಿಯದ ಅನೇಕ ವಿಷಯಗಳನ್ನು ತಿಳಿಸಲಾಗಿದೆ. ಅದೇಕೋ ಗೊತ್ತಿಲ್ಲ, ಅನೇಕ ವೈರಸ್‌ಗಳು ಚೀನಾದಲ್ಲೇ ಹುಟ್ಟಿಕೊಳ್ಳುತ್ತಿವೆ. ಈ ಹಿಂದೆ ಬರೀ ಜನಸಂಖ್ಯೆಗೆ ಪ್ರಸಿದ್ಧಿಯಾಗಿದ್ದ ಚೀನಾ ದೇಶ ಈಗ ‘ವೈರಸ್’ ಜನಸಂಖ್ಯೆಗೂ ಪ್ರಸಿದ್ಧಿಯಾಗುತ್ತಿರುವುದು ಯಾವ ಕಾರಣಕ್ಕೋ ತಿಳಿಯುವುದಿಲ್ಲ.

–ಎಸ್. ಶಶಿಧರ್, ಬೆಂಗಳೂರು

### ಅರಿವಿನ ‘ಮರಗಳ ಕಥೆ’

‘ಲಕ್ಕಿ ಎಂಬ ಅದೃಷ್ಟವನ್ನು ಅರಸುತ್ತಾ’ (ಜ. 23, ವಿನು ಗಂಗೆ) ‘ಮರಗಳ ಕಥೆ’ ಲೇಖನ ತುಂಬಾ ಚೆನ್ನಾಗಿದೆ. ಬೆಂಗಳೂರಿನಂತಹ ಮಹಾ ನಗರದಲ್ಲಿರುವ ಸಾವಿರಾರು ಮರ ಗಿಡಗಳ ಅರಿವು ನಮಗೆ ಇಲ್ಲ. ವಿನು ಗಂಗೆಯವರಂಥ ಪರಿಸರಪ್ರೇಮಿಗಳು ಪರಿಚಯ ಮಾಡಿಕೊಟ್ಟಾಗ ಮಾತ್ರ ಗೊತ್ತಾಗುವುದು. ಅದೂ ‘ಸುಧಾ’ ಪತ್ರಿಕೆ ಮುಖಾಂತರ. ಅಪರೂಪದ ಮರ ಗಿಡಗಳ ಬಗ್ಗೆ ಬಹಳ ಸರಳವಾಗಿ ಕಥೆಯ ರೂಪದಲ್ಲಿ ಬರೆಯುವ ಶೈಲಿ ಓದಲು ಖುಷಿ ಆಗುತ್ತದೆ, ಅರಿವೂ ಮೂಡುತ್ತದೆ.

–ಕೆ. ಗಣೇಶ ರಾಜ, ಬೆಂಗಳೂರು

### ಸುಂದರ ಛಾಯಾಚಿತ್ರ

‘ನಿಶಾಚರಿ ಹವಳ ಜರಿ’ (ಜ. 23, ಶಶಿಧರಸ್ವಾಮಿ ಆರ್. ಹಿರೇಮಠ) ಸುಂದರ ಛಾಯಾಚಿತ್ರದೊಡಗೂಡಿದ ಲೇಖನ ಚೆನ್ನಾಗಿದೆ.

–ಕೊಹಿಮ ಬಸರಕೋಡು

### ಹುಲಿಗಳಲ್ಲ, ಸಿಂಹಗಳು

‘ಜಿಂಬಾಬ್ವೆಯ ಮೋಗ್ಲಿ’ (ಜ. 23, ಪ್ರವೀಣ ಕುಲಕರ್ಣಿ) ಲೇಖನ ಚೆನ್ನಾಗಿದೆ. ಆದರೆ ಜಿಂಬಾಬ್ವೆ ಕಾಡುಗಳಲ್ಲಿರುವುದು ಹುಲಿಗಳಲ್ಲ, ಸಿಂಹಗಳು.

–ಎಚ್.ಎಸ್. ನಂದಕುಮಾರ್, ಮಂಗಳೂರು

### ಸೊಗಸಾದ ‘ಸ್ಪಿಟಿ’

‘ಸ್ಪಿಟಿ ವ್ಯಾಲಿ; ದೇವಭೂಮಿಯಲ್ಲೊಂದು ಮಳೆ ಕಾಣದ ನಂದನ’ (ಜ. 23, ಶಾಂತಾ ಜಯಾನಂದ) ಪ್ರವಾಸ ಲೇಖನ ಆಕರ್ಷಕ ಚಿತ್ರಗಳೊಂದಿಗೆ ಸುಂದರವಾಗಿ ಮೂಡಿಬಂದಿದೆ. ಹಿಮಾಲಯವೆಂದರೆ ಆಕರ್ಷಣೆ. ಆ ಹಿಮ ಕಣಿವೆಗಳನ್ನು, ಹಿಮಚ್ಛಾದಿತ ಪರ್ವತಗಳ ಸೌಂದರ್ಯವನ್ನು ಪದಗಳಲ್ಲಿ ಹಿಡಿದಿಡಲು ಸಾಧ್ಯವೇ? ಪ್ರವಾಸ ಕಥನ ಕಣ್ಣಿಗೆ ಕಟ್ಟುವಂತೆ ಇದೆ.

–ಚೇತನಾ ಎಂ., ಮೈಸೂರು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in